# ಆಯಸ್ಸು



ಗುರುಕುಲದಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದ ಓರ್ವ ಬಾಲಕ ತುಂಬಾ ಚೂಟಿಯಾಗಿದ್ದು ಎಲ್ಲರಿಂದಲೂ ಪ್ರಶಂಸೆ ಪಡೆಯುತ್ತಿದ್ದ. ಗುರುಗಳೂ ಅವನನ್ನು ಅವನ ಜಾಣತನಕ್ಕಾಗಿ ತುಂಬಾ ಪ್ರೀತಿಸುತ್ತಿದ್ದರು.

ಒಂದು ದಿನ ಗುರುಕುಲವನ್ನು ಸ್ವಚ್ಛ ಮಾಡುತ್ತಿದ್ದಾಗ ಪಿಂಗಾಣಿ ಬಟ್ಟಲೊಂದನ್ನು ಆಕಸ್ಮಿಕವಾಗಿ ಬೀಳಿಸಿದ. ಅದು ಒಡೆದು ನುಚ್ಚು ನೂರಾಯಿತು. ಅದು ಬಹಳ ಪುರಾತನವಾದ ಅಪರೂಪದ ಲೋಟ. ತುಂಬಾ ಬೆಲೆ ಬಾಳುವಂತಹದು. ಗುರುಗಳು ಲಾಗಾಯ್ತಿನಿಂದ ಬಹಳ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದರು. ಪಿಂಗಾಣಿ ಬಟ್ಟಲು ಬಿದ್ದು ಚೂರು ಚೂರು ಆಗುವಾಗ ಭಾರಿ ಶಬ್ದ ಆಯಿತು. ಆತ ಚೂರುಗಳನ್ನು ತನ್ನ ಕೈಯಲ್ಲಿ ಮರೆಯಾಚುತ್ತಿದ್ದ. ಆ ಕ್ಷಣಕ್ಕೆ ಸರಿಯಾಗಿ ಗುರುಗಳ ಆಗಮನವಾಯಿತು.

ಗುರುಗಳ ದೃಷ್ಟಿ ಬಾಲಕನ ಮೇಲೆ ಬಿದ್ದುದೇ ತಡ, 'ಗುರುಗಳೇ ಮನುಷ್ಯರು ಮಾತ್ರ ಸಾಯುತ್ತಾರಲ್ಲಾ, ಏಕೆ?' ಎಂದು ಕೇಳಿದ ಬಾಲಕ.

'ಅದು ಪ್ರಕೃತಿ ನಿಯಮ. ಪ್ರತಿ ಮನುಷ್ಯನೂ ಹಾಗೂ ಪ್ರತಿಯೊಂದು ವಸ್ತುವಿಗೂ ಇಂತಿಷ್ಟು ಆಯಸ್ಸು ಎಂದು ಭಗವಂತ ನಿಯಮ ಮಾಡಿದ್ದಾನೆ. ಆಯಸ್ಸು ಮುಗಿದ ಕೂಡಲೇ ಮರಣ ಸಂಭವಿಸುತ್ತದೆ. ಈ ನಿಯಮದ ಪ್ರಕಾರ ಮಾನವನಿಗಾಗಲಿ, ಇತರ ಪ್ರಾಣಿಗಳಿಗಾಗಲಿ, ಚರಾಚರ ವಸ್ತುಗಳಿಗಾಗಲಿ ಕೊನೆ ಎಂಬುದು ಇರುತ್ತದೆ. ಅದು ಸರಿ, ಈಗ ಏಕೆ ಈ ಪ್ರಶ್ನೆಯನ್ನು ಕೇಳಿದೆ?' ಎಂದರು ಗುರುಗಳು.

ತಕ್ಷಣವೇ ಬಾಲಕ ತನ್ನ ಕೈಗಳನ್ನು ಚಾಚಿ ಒಡೆದು ಹೋಗಿದ್ದ ಪಿಂಗಾಣಿ ಬಟ್ಟಲಿನ ಚೂರುಪಾರುಗಳನ್ನು ಗುರುಗಳ ಮುಂದೆ ಹಿಡಿದು ಪ್ರದರ್ಶಿಸಿದ. 'ಓಹೋ, ಹೀಗೋ ಸಮಾಚಾರ! ಪಿಂಗಾಣಿ ಬಟ್ಟಲು ತುಂಬಾ ಹಳೆಯದಾಗಿತ್ತು, ಇವತ್ತು ಅದಕ್ಕೂ ಆಯಸ್ಸು ಮುಗಿದು ಹೋಯಿತೆಂದು ಕಾಣುತ್ತದೆ! ಅದು ನಾನು ಮೊದಲೇ ಹೇಳಿದಂತೆ ಪ್ರಕೃತಿಯ ನಿಯಮ' ಎಂದರು.

ಬಾಲಕ ಇದನ್ನು ಹೊಸ ಬೋಧನೆಯೆಂದು ಸ್ವೀಕರಿಸಿದ.

(ಜೆನ್ ಕಥೆ)

**-ಎ.ಕೆ. ಪಟ್ಟಾಭಿ, ಬೆಂಗಳೂರು**

# ಅಮ್ಮ.. ಆಡಲು ಬಿಡು ನನಗೆ




ಹೇ...ಅಮ್ಮ ಆಡಲು ಬಿಡು ನನ್ನ
ನಾನಿನ್ನೂ 3 ವರ್ಷದ ಮಗು
ನನಗೇಕೆ ಈ ಶಾಲೆಯ ಹೊರೆ
ಹೊರೆಯಾದೆನಾ ನಿನಗೆ

ಶಿಕ್ಷಣದ ಶಿಕ್ಷೆ ಯಾಕೆ ಈಗಲೇ
ಮಾತೃ ಪ್ರೀತಿಯನು ಉಣಿಸು
ಕರುಳ ಸಂಬಂಧ ತೋರಿಸು
ಅಕ್ಕರೆಯ ಮಡಿಲು ನೀನಾಗು

ತಳ್ಳದಿರು ನನ್ನ ಶಿಶು ವಿಹಾರಕೆ
ಆಡುವ ವಯಸ್ಸು ನನ್ನದು
ಬೇಕಿಲ್ಲವೇ ನನ್ನ ತುಂಟಾಟ
ಇಷ್ಟವಿಲ್ಲವೇ ನನ್ನ ಮನೆಯಾಟ

ಸೇರಿಸದಿರು ಶಾಲೆ ಬಂಧಿಖಾನೆಗೆ
ಅನುಭವಿಸು ನನ್ನ ಬಾಲ್ಯ ಸಂಬಂಧ
ಮುಂದೆ ಸಿಗದು ಇಂತಹ ಅನುಭವವ
ತಳ್ಳದಿರು ನೀ ನನ್ನ ದೂರಕೆ

ಶಾಲೆಯ ಒಂದು ಹೆಜ್ಜೆಯ ನಡೆ
ಮರುಕಳಿಸದು ನನ್ನ ಬಾಲ್ಯವ
ಪದವಿವರೆಗೆ ನಾ ಸಿಗೆನು ನಿನಗೆ
ಮತ್ತೆ ಸಿಗದು ನನ್ನ ಬಾಲ್ಯ ಸುಖ

ಬೆಳೆದು ದೊಡ್ಡವನಾದ ಮೇಲೆ
ನನ್ನ ಜವಾಬ್ದಾರಿ ನನಗೇ
ಮತ್ತೆಲ್ಲಿ ಕಾಣುವಿ ನನ್ನ ಬಾಲ್ಯದ ಸವಿ
ಮತ್ತೆಲ್ಲಿ ಹುಡುಕುವಿ ನನ್ನ ಬಾಲ್ಯವ

ನೂಕದಿರು ನನ್ನ ಬಾಲ್ಯ ಸಂಬಂಧವ
ಕಳಚದಿರು ಕುಟುಂಬ ಬಾಂಧವ್ಯ
ತಂದೆತಾಯಿ ಸಂಬಂಧ ಇಲ್ಲದೇ
ಬೆಳೆಸದಿರು ನನ್ನ ಯಂತ್ರವನ್ನಾಗಿ

**- ಪಲುಗುಲ ನಾಗರಾಜ, ರಾಯಚೂರು**